ಸೇಂದಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡ ಮಾರ್ತೆದಾರರ ಸಂಖ್ಯೆ

2152 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಮೂರ್ತೆದಾರರ ಸಂಖ್ಯೆ ಎಷ್ಟು?

ಆ) ಅವರ ಪುನರ್ವಸತಿ ಬಗ್ಗೆ ಸಹಕಾರ ಕೈಗೊಂಡಿರುವ ಕ್ರಮಗಳೇನು?

ಇ) ಸರಕಾರವು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೂರ್ತೆದಾರರ ತೊಂದರೆಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಕ ಮಾಡಲಾಗಿದೆಯೇ ಹಾಗೂ ಇದು ಈಗ ಯಾವ ಹಂತದಲ್ಲಿದೆ?

ಈ) ಈ ಮೂರ್ತೆದಾರರಿಗೆ ಅಥವಾ ಅವರ ಕುಟುಂಬಿಕರಿಗೆ ಸರಕಾರಿ ಉದ್ಯೋಗದಲ್ಲಿ ಅವಕಾಶವನ್ನು ಕಲ್ಪಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಸುಮಾರು 10,468.

ಆ) ಈ ವಿಚಾರವನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲು ಉದ್ದೇಶಿಸಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ಸದಸ್ಯತ್ವವನ್ನ ಒಳಗೊಂಡಂತೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ಉದ್ದೇಶಿಸಿದೆ.

ಈ) ಇಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ : ಸ್ವಾಮಿ, ನಮ್ಮ ರಾಜ್ಯದಲ್ಲಿ ಸೇಂದಿ ಮಾರಾಟವನ್ನು ಮಂಡಿಸಲಾಯಿತು. ಇದರಿಂದ ಮೂರ್ತೆದಾರರುಗಳಿಗೆ ಯಾವುದಾದರೂ ಬದಲಿ ಉದ್ಯೋಗಕೊಡುವಂತೆಯೂ ಅವರನ್ನೂ ಯಾವ ಮಾರ್ಗಕ್ಕೂ ಹಾಕುವುದಿಲ್ಲವೆಂದು ಆಗಿನ ಅಬಕಾರಿ ಸಚಿವರು ಈ ಸದನಕ್ಕೆ ಮಾತನ್ನು ಕೊಟ್ಟಿದ್ದರು. 1950ರಲ್ಲಿ ಮದ್ರಾಸ್ ಸರ್ಕಾರದವರು ಈ ಸೇಂದಿ ನಿಷೇಧವನ್ನು ತರುವಾಗ ನಮ್ಮ ಜಿಲ್ಲೆ ಮದ್ರಾಸ್ ರಾಜ್ಯದಲ್ಲಿ ಸೇರಿಕೊಂಡಿತ್ತು. ಆ ಕಾನೂನನ್ನು ಜಾರಿಪಡಿಸುವುದಕ್ಕೆ ಮೊದಲೇ ಈ ಬಡ ಮೂರ್ತೆದಾರರಿಗೆ ಸವಲತ್ತುಗಳನ್ನು ಒದಗಿಸುವ ಸಲುವಾಗ ಅನೇಕ ಯೋಜನೆಗಳನ್ನು ತಯಾರಿಸಿದ್ದರು. ಅವರಿಗೆ ಸರ್ಕಾರದಲ್ಲಿ ಉದ್ಯೋಗ ಕೊಡುವುದು ಹೊಟೆಲ್ ಉದ್ಯಮಗಳನ್ನು ನಡೆಸುವುದಾದರೆ ಅವರಿಗೆ ಲೈಸೆನ್ಸ್‌ಗಳನ್ನು ಕೊಡುವುದು ಭೂಮಿ ಇಲ್ಲದವರೆಗೆ ಭೂಮಿಯನ್ನು ಕೊಟ್ಟು ಇನ್ನೂ ಹಲವಾರು ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಆದರೆ ನಮ್ಮ ಸರ್ಕಾರದ ಮುಂದೆ ನಾನು ಈ ಬಡ. ಜನರ ಮೂರ್ತೇದಾರರ ನಿರುದ್ಯೋಗ ವಿಚಾರಗಳನ್ನು ತಿಳಿಸಿದಾಗ ಆಗಿನ ಸಚಿವರು ಪ್ರತಿಜಿಲ್ಲೆಯಲ್ಲಿಯೂ ಜಿಲ್ಲಾಧಿಕಾರಿಗಳ ನೈತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿಯಾವ ಮೂರ್ತೇದಾರರಿಗೂ ತೊಂದರೆಯಾಗದ ರೀತಿಯಲ್ಲಿ ಮಾರ್ಗಕ್ಕೆ ತಾವು ಕಾರ್ಯಕ್ರಮವನ್ನು ನಿರ್ವಹಿಸುವುದಾಗಿ ಮಾತನ್ನು ಕೊಟ್ಟಿದ್ದರು. ಆದರೆ ಮಂತ್ರಿಗಳ ಉತ್ತರದಲ್ಲಿ ನೋಡಿದಾಗ ಈತನಕ ಈ ಬಡ ಮೂರ್ತೇದಾರರ ಪರವಾಗಿ ಒಂದೇ ಒಂದು ಪೈಸೆಯನ್ನೂ ಖರ್ಚು ಮಾಡಿಲ್ಲ. ನಿಜವಾಗಿಯೂ ಹಳ್ಳಿಯ ಜನರಾದ ಕಾರಣ ಅವರು ದಂಗೆಎಳಲಿಲ್ಲ, ನಿರಶನ ವ್ರತವನ್ನು ಆಚರಿಸಲಿಲ್ಲ, ವಿಧಾನ ಸೌಧಕ್ಕೆ ಮುತ್ತಿಗೆಯನ್ನು ಹಾಕಲಿಲ್ಲ. ಇದೇ ಬೇಡಿಕೆಯಲ್ಲಿ ಇಷ್ಟು ಸಾವಿರ ಮೂರ್ತೇತಾರರಿಗೆ ತೊಂದರೆ ಬಂದರೆ ಶಾಸಕರನ್ನು ಹೊರಗೆ ಬರಲಿಕ್ಕೆ ಬಿಡುತ್ತಿರಲಿಲ್ಲ ಮಂತ್ರಿಗಳ ಮನೆಗಳಿಗೆ ಮುತ್ತಿಗೆ ಹಾಕುತ್ತಿದ್ದರು. ಆದರೆ ಅವರು ಆ ಕೆಲಸವನ್ನು ಮಾಡಿಲಿಲ್ಲ, ಆದ್ದರಿಂದ ಸರ್ಕಾರದವರು ಇದರ

ಬಗ್ಗೆ ಏನು ಕ್ರಮ ತೆಗೆದುಕೊಳ್ಳದಿರುವ ಕಾರಣ ನಾನು ಬಹಳ ಪಶ್ಚಾತ್ತಾಪ ಪಡುತ್ತಿದ್ದೇನೆ. ಮೂರ್ತೇದಾರರಿಗೆ ಸವಲತ್ತುಗಳನ್ನು ಕೊಡುತ್ತೇವೆಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಮಾತನ್ನು ಕೊಟ್ಟಿದ್ದರು ಅದರಂತೆ ಮಾಡಲಿಲ್ಲ. ಇನ್ನು ಮುಂದಾದರೂ ಪ್ರತಿ ಜಿಲ್ಲೆಯಲ್ಲಿ ಒಂದು ಕಮಿಟಿಯನ್ನು ರಚಿಸಿ ಯಾರುಯಾರು ಮೂರ್ತೇದಾರರು ಇದ್ದರೋ ಅವರಿಗೆ ಉದ್ಯೋಗವನ್ನು ಒದಗಿಸುವುದು. ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುವಂಥ ಸವಲತ್ತುಗಳನ್ನು ಮಾಡಲು ಒಂದು ಯೋಜನೆಯನ್ನು ಸರ್ಕಾರದವರು ಮಾಡುತ್ತಾರೆಂದು ನಾನು ಈಗ ಅಪೇಕ್ಷಿಪಡುತ್ತೇನೆ.

ಶ್ರೀ ಧರ್ಮಸಿಂಗ್ ; ಸನ್ಮಾನ್ಯ ಅಧ್ಯಕ್ಷರೇ, ಎರಡು ವರ್ಷಗಳ ಹಿಂದೆ ಇದೇ ಪ್ರಶ್ನೆಯನ್ನು ಮಾನ್ಯ ಸೋಮಪ್ಪ ಸುವರ್ಣರವರು ಕೇಳಿದ್ದರು. ಇದು ಅವರ ಜಿಲ್ಲೆಗೆ ನೇರವಾಗಿ ಸಂಬಂಧಪಟ್ಟ ನಮಸ್ಯೆಯಾಗಿದೆ. ಇದರ ಬಗ್ಗೆ ಅವರಿಗೂ ಕೂಡ ಗೊತ್ತಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಡೆಪ್ಯುಟಿ ಕಮೀಷನರ್ ಎಕ್ಸೆಸ್ ಜಾಯಿಂಟ್ ರಿಜಿಸ್ಟ್ರಾರ್ ಆಪ್ ಕೋಆಪರೋಟೀವ್ ಸೊಸೈಟೀಸ್ ಇವರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಿತ್ತು. ಅಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚು ಜನರು ಏನು ನಿರುದ್ಯೋಗಿಗಳಾಗಿದ್ದಾರೆ. ಅವರಿಗೆ ಉದ್ಯೋಗವನ್ನು ಒದಗಿಸತಕ್ಕಂಥ ರೀತಿಯಲ್ಲಿ ಸಂಬಂಧಪಟ್ಟ ಜಿಲ್ಲಾಪರಿಷತ್‌ನವರಿಗೆ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ರವರಿಗೆ ಮತ್ತು ಖಾದಿ ಬೋರ್ಡ್‌ನವರಿಗೆ ಅದೇಶವನ್ನು ಕೊಡಲಾಗಿದೆ. ಯಾವರೀತಿ ಸ್ಕೀಮ್ ಪ್ರಿಪೇರ್‌ಮಾಡಿ ಅವರಿಗೆ ಯಾವರೀತಿ ಉದ್ಯೋಗಗಳನ್ನು ಕೊಡಬೇಕು ಎನ್ನುವ ಬಗ್ಗೆಯೂ ಕೂಡ ಈಗಾಗಲೇ ಸರ್ಕಾರ ಆದೇಶವನ್ನು ಕೊಟ್ಟಿದೆ. ಸರ್ಕಾರದ ಆದೇಶ ಎಲ್ಲಿಯವರೆಗೆ ಪರಿಪಾಲನೆಯಾಗಿದೆ ಎನ್ನುವ ಬಗ್ಗೆಯೂ ಕೂಡ ನಿನ್ನೆ ನೇರವಾಗಿ ಅಧಿಕಾರಿಗಳೊಂದಿಗೆ ಮಾತನಾಡಿದೆ. ಮೊನ್ನೆಯೂ ಕೂಡ ಮಾನ್ಯ ಶಿಕ್ಷಣ ಸಚಿವರ ಕೊಠಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಶಾಸಕರ ಜೊತೆಯಲ್ಲಿ ಸಮೂಲೋಚನೆ ಮಾಡಿ ಅದರ ಬಗ್ಗೆ ಹೆಚ್ಚಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಕೂಡ ಹೇಳಿದ್ದೇವೆ. ಅವರೂ ಕೂಡ ಆ ಸಭೆಯಲ್ಲಿ ಹಾಜರಿದ್ದರು. ಅದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ : ನಮ್ಮ ದಕ್ಷಿಣ ಜಿಲ್ಲೆಯವರ ಮಟ್ಟಿಗೆ ನಮ್ಮ ಸರ್ಕಾರದವರು ಯಾವ ಮೂರ್ತೇದಾರರ ಪರವಾಗಿ ಅವರ ಕಳಕಳಿಯನ್ನು ಅರ್ಥಮಾಡಿಕೊಂಡಿರುವುದಕ್ಕಾಗಿ ನಾನು ತುಂಬ ಆಭಾರಿಯಾಗಿದ್ದೇನೆ. ಆದರೆ ನಮ್ಮ ರಾಜ್ಯದಲ್ಲಿರುವ ಇತರೇ ಮೂರ್ತೇದಾರರ ಪರವಾಗಿ ತಾವು ಏನು ಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಅವರ ಬಗ್ಗೆ ಯಾವರೀತಿಯಾದ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಈ ಬಗ್ಗೆ ಚಳುವಳಿ ಆಯಿತು. ಶಾಸಕರು ಕೂಡ ಈ ಬಗ್ಗೆ ಕೆಲಸ ಮಾಡಿದರು. ನಮ್ಮ ಲೋಕಸಭಾ ಸದಸ್ಯರೂ ಕೂಡ ಬೇಕಾದಷ್ಟು ಕೆಲಸ ಮಾಡಿದರು. ಹಾಗಾಗಿ ನಮ್ಮ ಜಿಲ್ಲೆಯ ಮೂರ್ತೇದಾರರಿಗೆ ಒಂದು ರೀತಿಯ ಸೌಲಭ್ಯವನ್ನು ಒದಗಿಸಿದ್ದೀರಿ. ಅದಕ್ಕಾಗಿ ನಾನು ಆ ಭಾರಿಯಾಗಿದ್ದೇನೆ. ಆದರೆ ರಾಜ್ಯದ ಇತರ ಕಡೆಯ ಮೂರ್ತೇದಾರರಿಗೆ ಏನೂ ಕೆಲಸ ಮಾಡಿಲ್ಲ. ಯಾವ ಸವಲತ್ತುಗಳನ್ನು ಕೊಟ್ಟಿಲ್ಲ. ಸಾವಿರಾರು ಮೈಲಿ ದೂರದಲ್ಲಿರುವ ಮದ್ರಾಸ್ ಸರ್ಕಾರದ ಆಳಿವಳಿಕೆಯಲ್ಲಿರುವಾಗ ಮೂರ್ತೇದಾರರ ಕಸುಬನ್ನು ನಿಶೇಧಗೊಳಿಸುವಾಗ ಆ ಸರ್ಕಾರದವರು ಲಕ್ಷಾನುಗಟ್ಟಲೆ ಹಣವನ್ನು ಮೂರ್ತೇದಾರರಿಗೆ ಕೊಟ್ಟಿದ್ದರು. ತಮಗೆ ಸೂಚನೆ ಕೊಟ್ಟರೂ ಸಹಿತ ಸರ್ಕಾರದವರು ಈ ರಾಜ್ಯದ ಮೂರ್ತೇದಾರರಿಗೆ ಒಂದು ಪೈಸೆಯಷ್ಟು ಕೆಲಸ ಮಾಡಿರುವುದಿಲ್ಲ. ಆದ್ದರಿಂದ ಇನ್ನಾದರೂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮಾರಾಟ ನಿಷೇಧವನ್ನು ಏನು ಮಾಡಿದ್ದರು, ಅದನ್ನು ರದ್ದು ಮಾಡಿ ಸೇಂದಿ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಬೇರೆ ಕಡೆ ಎಲ್ಲಿ ಮಾಡಿದ್ದೀರಿ. ಕಾರವಾರದಲ್ಲಿ ಸ್ವಲ್ಪ ಮಾಡಿದ್ದೀರಿ. ಬಾಕಿ ಯಾವ ಜಿಲ್ಲೆಯಲ್ಲೂ ಸೇಂದಿ ಮಾರಾಟವನ್ನು ನಿಷೇಧ ಮಾಡಿದ ಮೇಲೆ ಮತ್ತು ಮಾರಾಟ ಮಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ಹೀಗಾಗಿ ಸುಮಾರು 70 ಸಾವಿರ ಜನ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಹಿಂದಿನ ಮುಖ್ಯ ಮಂತ್ರಿಗಳು ಅವರಿಗೆ ಸಹಾಯ ಮಾಡಲಿಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಇವತ್ತಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯವರು ಪ್ರಭಾವಿ ಜನರಿದ್ದಾರೆಂದು ಅವರ ಒತ್ತಾಯಕ್ಕೆ ಮಣಿದು ಅವರಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದೀರಾ? ಇದುವರೆಗೆ ನೀವು 7-8 ಕಮಿಟಿಗಳನ್ನು ಮಾಡಿರುವುದಾಗಿ ಹೇಳಿದ್ದೀರಿ. ಆ ಸಮಿತಿಗಳು ವರದಿ ಕೊಡುವುದು ಯಾವಾಗ? ಇದುವರೆಗೆ ಒಂದು ಸಮಿತಿಯಾದರೂ ವರದಿ ಕೊಟ್ಟು ಅದನ್ನು ಜಾರಿಗೆ ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಾ? ಈ ಸಮಿತಿಯ ವರದಿ ಯಾವಾಗ ಬರುತ್ತದೆ? ಎಷ್ಟು ತಿಂಗಳು ಗಡುವು ಕೊಡುತ್ತೀರಿ? ಅಲ್ಲಿಯವರೆಗೆ ಆ ಕಾರ್ಮಿಕರು ಎಲ್ಲಿರಬೇಕು? ಯಾವ ರೀತಿ ಜೀವನ ಮಾಡಬೇಕು. ಅವರು ಸರ್ಕಾರದ ವತಿಯಿಂದ ಸಾಲವನ್ನಾದರೂ ಕೊಡಿ ಎಂದು ಕೇಳುತ್ತಿದ್ದಾರೆ. ಮಾನ್ಯ ಪಂಪಾಪತಿಯವರು ನೇತೃತ್ವದಲ್ಲಿ ದೊಡ್ಡ ಮೆರಣಿಗೆ ಮಾಡಿ ಸಾವಿರಾರು ಜನ ಕಾರ್ಮಿಕರು ಬಂದು ಮುಖ್ಯ ಮಂತ್ರಿಗಳನ್ನು ಬೇಟಿ ಮಾಡಿದರು. ಅವರಿಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ಮಾತೆತ್ತಿದರೆ ಸಮಿತಿ ಅನ್ನುತ್ತೀರಿ. ಸಮಿತಿಯ ವರದಿ ಯಾವಾಗ ಬರುತ್ತದೆ? ಯಾವಾಗ ಕಾರ್ಯಾಚರಣೆ ಮಾಡುತ್ತೀರಿ? ಕಾರ್ಯಾಚರಣೆ ಮಾಡುವುದಕ್ಕೆ ತೊಂದರೆ ಏನಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ನಿಜವಾಗಿ ಇದು ಗಂಭೀರವಾದ ಪ್ರಶ್ನೆ. ಮೊನ್ನೆ ಗುಲ್ಬರ್ಗಾ ಜಿಲ್ಲೆಗೆ ಹೋದಾಗ ಅಲ್ಲಿರತಕ್ಕ ಜನರು ಬೇಟಿ ಆದಾಗ ಕಂಟ್ರಾಕ್ಟರ್ ಜೊತೆ ಸಮಾಲೋಚನೆ ಮಾಡಿ ಅವರಿಗೆ ಉದ್ಯೋಗ ಒದಗಿಸಿಕೊಡಬೇಕೆಂದು ಮಾಡಿದ್ದೇವೆ. ಈಗ ಎಲ್ಲಾ ಜಿಲ್ಲೆಗಳಲ್ಲಿ ಈ ಸಮಸ್ಯೆ ಇದೆ. ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಅಲ್ಲ. ತಾವು ಈ ದಿಸೆಯಲ್ಲಿ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದೀರಿ. ನಾನು ಕೇವಲ ಒಂದು ವಾರದಲ್ಲಿ ಪುನಃ ಸಭೆ ಕರೆಯುತ್ತೇನೆ. ತಮ್ಮನ್ನು ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಆ ಸಭೆಗೆ ಕರೆಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ಇದರ ಬಗ್ಗೆ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಅಧಿಕಾರಿಗಳ ಸಮಿತಿಯನ್ನು ಮಾಡಿದ್ದೇವೆ. ಅದು ಇನ್ನೂ ವರದಿಯನ್ನು ಕೊಟ್ಟಿಲ್ಲ. ಈ ಬಗ್ಗೆ ತಮ್ಮ ಮನಸ್ಸಿನಲ್ಲಿ ಕಳವಳ ಇದೆ. ಅದನ್ನು ಬಗೆಹರಿಸುವುದಕ್ಕೆ ತಮ್ಮ ಸಮ್ಮುಖದಲ್ಲಿ ಅಧಿಕಾರಿಗಳೊಡನೆ ಚರ್ಚೆ ಮಾಡಲು ತಮ್ಮನ್ನು ಕರೆಸುತ್ತೇನೆ. ಕಮಿಟಿ ಏನು ಮಾಡಿದ್ದೇವೆ, ಅದು ಯಾವಾಗ ವರದಿ ಕೊಡುತ್ತದೆಂಬುದನ್ನೆಲ್ಲ ಸಮಕ್ಷಮ ಮಾತನಾಡಿ ತೀರ್ಮಾನ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇಡೀ ರಾಜ್ಯದಲ್ಲಿ ಸೇಂದಿ ನಿಷೇದ ಆಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಪುನಃ ಮಾರಾಟಕ್ಕೆ ಅವಕಾಶ ಕೊಟ್ಟರು. ಆದರೆ ಸರ್ಕಾರಕ್ಕೆ ಇದರಿಂದ ಒಂದು ರೂಪಾಯಿ ಕೂಡ ಆದಾಯ ಬರುತ್ತಿಲ್ಲ. ಹಿಂದೆ ಸೇಂದಿ ಮಾರಾಟದಿಂದ ಎಷ್ಟು ಹಣ ಬರುತ್ತಿತ್ತು ಅದು ಇವತ್ತು ಸಂಪೂರ್ಣವಾಗಿ ನಿಂತುಹೋಗಿ ಒಂದು ರೂಪಾಯಿ ಕೂಡ ಬರುತ್ತಿಲ್ಲ. ಇದನ್ನು ಹೀಗೇ ಫ್ರೀ ಆಗಿ ಬಿಡುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದೀರಾ? ಮೂಡಿಗೆರೆ ತಾಲ್ಲೂಕಿನಿಂದ 20 ಜನರು ಬಂದು ನಮ್ಮ ತಾಲ್ಲೂಕಿನಲ್ಲೂ ಸೇಂದಿ ಮಾರಾಟ ಮಾಡುವುದಕ್ಕೆ ಅವಕಾಶ

ಕೊಡಿಸಿ ಎಂದು ಹೇಳಿದರು. ಸೇಂದಿ ಮಾರಾಟಕ್ಕೆ ಯಾವುದೇ ನಿಯಂತ್ರಣ ಇಲ್ಲದೆ ಒಂದು ರೂಪಾಯಿ ಆದಾಯ ಬರದೆ ಇಚ್ಛಾನುಸಾರ ಯಾರು ಬೇಕಾದರೂ ಮಾರಾಟ ಮಾಡಿಕೊಳ್ಳಬಹುದೆಂಬ ಸ್ಥಿತಿಗೆ ಸರ್ಕಾರ ಹೋಗಿದ್ದರೆ ಬೇರೆ ತಾಲ್ಲೂಕುಗಳಿಗೂ ಇದನ್ನು ವಿಸ್ತರಣೆ ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ? ಈ ರೀತಿ ಸೇಂದಿ ಮಾರಾಟ ಮಾಡುವುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ಪರವಾನಗಿ ಕೊಟ್ಟಿದ್ದರಿಂದ ಸರ್ಕಾರಕ್ಕೆ ಏನಾದರೂ ಆದಾಯ ಬಂದಿದೆಯೇ?

ಶ್ರೀ ಧರ್ಮಸಿಂಗ್ : ಈಗ ಮಾನ್ಯ ವಿರೋಧಪಕ್ಷದ ನಾಯಕರು ಏನು ಪ್ರಶ್ನೆಕೇಳಿದ್ದಾರೆ ಅದು ಸೋಮಪ್ಪಸುವರ್ಣ ಅವರ ಪ್ರಶ್ನೆಯಲ್ಲಿ ಉದ್ಭವಿಸುವುದಿಲ್ಲ. ಆದ್ದರಿಂದ ಅದಕ್ಕೆ ಬೇಡಿಕೆ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ವಿವರವಾಗಿ ಉತ್ತರಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರಕ್ಕೆ ಏನಾದರೂ ಆದಾಯ ಬಂದಿದೆಯೆ? ಅಲ್ಲಿಂದ ಆದೇಶ ಕೊಟ್ಟು ಚಿಕ್ಕಮಗಳೂರು ಜಿಲ್ಲೆಗೆ, ಮೈಸೂರು ಜಿಲ್ಲೆಗೆ ಸೇಂದಿ ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆಂದರೆ ಆಗುವುದಿಲ್ಲ. Why should we sit here? As representatives of the people we would like to know what exactly the finance received by the State Government.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಸರ್ಕಾರದ ನೀತಿ ಏನು? ಸರ್ಕಾರಕ್ಕೆ ಏನಾದರೂ ನೀತಿ ಇದೆಯೇ, ತತ್ವ ಇದೆಯೇ? ಒಂದು ಕಡೆ ಕೊಡುವುದು, ಮತ್ತೊಂದು ಕಡೆ ಬಿಡುವುದು ಸರಿಯಲ್ಲ. ಈ ಮೂಲಕ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

SRI D.B. CHANDREGOWDA : Place the details on the table of the House. ಯಾವುದೂ ಇಲ್ಲ, ಎಲ್ಲವನ್ನು ಬಿಟ್ಟುಬಿಟ್ಟಿದ್ದೇವೆಂದು ಸರ್ಕಾರ ಹೇಳಬಹುದೇ?

ಶ್ರೀ ವಾಟಾಳ್ ನಾಗರಾಜ್ : ಸೇಂದಿ ಮಾರಾಟ ಮಾಡುವುದಕ್ಕೆ ಸಂಪೂರ್ಣವಾಗಿ ನಿಷೇಧ ಮಾಡುತ್ತೀರಾ?

SRI D.B. CHANDRE GOWDA : Are we running a deemocratic State or dictatorship by few individuals, taking decision as and when they like?

10.15 ಎ.ಎಂ

SRI. DHARMA SINGH : I have got all the particulars about this. ಸರ್ಕಾರಕ್ಕೆ ಎಷ್ಟು ಹಾನಿಯಾಗುತ್ತದೆ ಎಷ್ಟು ಲಾಭವಾಗುತ್ತದೆ ಎಂಬುದು ಕೂಡ ನಮ್ಮಲ್ಲಿದೆ. ಆದರೆ ಈ ಪ್ರಶ್ನೆಗೆ ಅದು ಉದ್ಭವಿಸುವುದಿಲ್ಲ. ನನ್ನ ಖಾತೆಗೆ ಸಂಬಂಧಪಟ್ಟ ಡಿಮ್ಯಾಂಡ್ ಬಂದಾಗ ಅಥವಾ ಪ್ರತ್ಯೇಕ ಪ್ರಶ್ನೆ ಹಾಕಿದಾಗ ನಾನು ನೇರವಾಗಿ ಉತ್ತರ ಕೊಡುತ್ತೇನೆ ಎಂದು ಹೇಳಿದ್ದೇನೆ.

ಅಧ್ಯಕ್ಷರು : Thrust of the question is, ಪುನರ್ವಸತಿ ಆದಾಯ ಎಷ್ಟು ಕಡಿಮೆಯಾಯಿತು ಎಂಬುದು ಬೇರೆ ಪ್ರಶ್ನೆ.

D.B. CHANDRE GOWDA : With due apology, the thrust of the question is also, ಸೇಂದಿ ಮಾರಾಟ ನಿಷೇಧ....

ಅಧ್ಯಕ್ಷರು : ಮೊದಲನೇ ಪ್ರಶ್ನೆ ಸೇಂದಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವವರ ಸಂಖ್ಯೆ ಎರಡನೆಯದು ಅವರ ಪುನರ್ವಸತಿ ಮೂರನೆಯದು ಜಿಲ್ಲಾಧಿಕಾರಿಗಳ ಸಮಿತಿ ಬಗ್ಗೆ ಇದೆ. ಅದರ ಬಗ್ಗೆ ಕೇಳಿದರೆ he will reply..

ಶ್ರೀ ಡಿ.ಬಿ. ಚಂದ್ರೇಗೌಡ : ಇವರ ಸರ್ಕಾರ ಚುನಾವಣೆಯಲ್ಲಿ ಗೆದ್ದು ಬಂದ ತಕ್ಷಣವೇ ಇಡೀ ರಾಜ್ಯದಲ್ಲಿ ಸೇಂದಿ ಮಾರಾಟ ನಿಷೇಧ ಮಾಡಿದ್ದೇವೆ ಎಂದು ಭುಜ ತಟ್ಟಿಕೊಂಡರು. ಮುಖ್ಯಮಂತ್ರಿಗಳು ಬದಲಾವಣೆ ಆದ ತಕ್ಷಣ ಮಂಗಳೂರಿನಲ್ಲಿ ಮಾತ್ರ ಸೇಂದಿ ಮಾರಾಟಕ್ಕೆ ಅವಕಾಶ ಕೊಟ್ಟಿದ್ದೇವೆ ಎಂದರು. ಅದು ಯಾವುದಾದರು ಒಂದು ಶಾಸನದ ಅಡಿಯಲ್ಲಿ ಬರಬೇಕಲ್ಲ. ಯಾವ ಶಾಶನದ ಅಡಿಯಲ್ಲಿ ಕೊಟ್ಟರು? ಇದಕ್ಕೇನಾದರೂ ಆರ್ಥಿಕವಾದ ಒಂದು ನೀತಿ ಇದೆಯೇ? ಅಥವಾ ಒಂದು ಪ್ರಿನ್ಸಿಪಲ್ ಬೇಡವೇ ಸರ್ಕಾರಕ್ಕೆ? ಏನಾದರೂ ಅದಾಯ ಬರುತ್ತದೋ? ಸುಮ್ಮನೆ ಬರೆದುಕೊಳ್ಳುತ್ತಾ ಹೋಗಿಬಿಡುವುದೆ? Is the state of proprietory concern? I would like to know from the hon,member if they framed rules., under what provision of law they exempted D. Kannada District. I am not opposed to it. Would they extend the same facilities to otehr districtsa also?

ಶ್ರೀ ಧರ್ಮಸಿಂಗ್ : ಇದು ಮುಖ್ಯವಾದ ಪ್ರಶ್ನೆ. ಮತ್ತೊಮ್ಮೆ ತಾವು ಒಂದು ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ. ಡಿಮ್ಯಾಂಡ್‌ನಲ್ಲಿ ಡಿಸ್‌ಕಸ್ ಮಾಡೋಣ.

ಅಧ್ಯಕ್ಷರು : ಅವರ ಡಿಮ್ಯಾಂಡ್ ಬಂದಾಗ ನೀವು ಹೈಲೈಟ್ ಮಾಡಬಹುದು. ಸಾದತ್ ಆಲಿ ಖಾನ್ ಅವರೆ, ನಿಮ್ಮ ಪ್ರಶ್ನೆಗೆ ಸರ್ಕಾರದವರು ಮೂರು ವಾರ ಟೈಮ್ ಕೇಳಿದ್ದಾರೆ. ಆದ್ದರಿಂದ ಮೂರು ವಾರದ ನಂತರ ನಿಮ್ಮ ಪ್ರಶ್ನೆ ಬರುತ್ತದೆ. ಕರಾರುವಾಕ್ಕಾಗಿ ಮೂರುವಾರ ಕೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲ ಸ್ವಾಮಿ, ಮೂರು ವಾರದೊಳಗಡೆ ಸದನ ಇರುತ್ತದೆಯೇ ಏನು? ಕರೆಕ್ಟಾಗಿ ಮೂರು ವಾರ ಕೇಳುವ ಉದ್ದೇಶ ಏನು? ಮೂರು ವಾರದಲ್ಲಿ ಏನಾಗಿದೆ?

ಅಧ್ಯಕ್ಷರು ; ಮೂರು ವಾರ ಬೇಕು ಅದು ಟ್ರಾವಲ್ ಆಗಬೇಕಾದರೆ.

ಶ್ರೀ ವಾಟಾಳ್ ನಾಗರಾಜ್ : ಸಭೆ ಎಲ್ಲಿಯವೆಗೆ ನಡೆಯುತ್ತದೆ ಎಂಬುದು ಇನ್ನೂ ನಿರ್ಧಾರ ಆಗಿಲ್ಲ. ಅಷ್ಟು ಬೇಗ ಸಭೆ ಮುಗಿದರೆ...

ಅಧ್ಯಕ್ಷರು : ಮೂರು ವಾರ ನಡೆಯಬೇಕಾಗುತ್ತದೆ ಅವರ ಪ್ರಶ್ನೆ ಬರಬೇಕಾದರೆ.

ಶ್ರೀ ವಾಟಾಳ್ ನಾಗರಾಜ್ : ಈ ಪ್ರಶ್ನೆಗೋಸ್ಕರ ಮೂರು ವಾರ ಕೂರಲೇಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ಒಂದೂ ಅರ್ಥವಾಗುತ್ತಿಲ್ಲ. ಸರ್ಕಾರದವರು ಪ್ರಶ್ನೆಗೆ ಉತ್ತರ ಕಳುಹಿಸುವುದರ ಬಗ್ಗೆ ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ನಾನು ಬಹಳ ಸರಳವಾಗಿರತಕ್ಕ ಪ್ರಶ್ನಯನ್ನು ಕೇಳಿದ್ದೆ. ತಾವು ಅದನ್ನು ತಡೆಹಿಡಿದಿದ್ದೀರಿ. ತಮಗೆ ಅಧಿಕಾರ ಇದೆ ತಡೆಹಿಡಿಯುವುದಕ್ಕೆ, ಸರ್ಕಾರಕ್ಕೆ ಸಮಯಾವಕಾಶ ಕೊಟ್ಟಿದ್ದೀರಿ. ನಾನು ಮತ್ತು ಆರ್.ವಿ. ದೇಶಪಾಂಡೆ ಅವರು ಸಾರಿಗೆ ಸಂಸ್ಥೆ ದರ ಹೆಚ್ಚು ಮಾಡಬೇಕೆಂಬುದು ಸರ್ಕಾರದ ಮುಂದೆ ಇದೆಯೇ ಅಥವಾ ಇಲ್ಲವೆ ಎಂಬ ಪ್ರಶ್ನೆ ಕೇಳಿದ್ದೆವು. ಇಷ್ಟೇ ನಮ್ಮಿಬ್ಬರ ಪ್ರಶ್ನೆ. ಇದಕ್ಕೆ 15ದಿನ ಆಯಿತು. ಸನದ ಪ್ರಾರಂಭವಾಗಿ ಒಂದುವಾರ ಆಯಿತು. ಇಂಥ ಸರಳವಾದ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ ; ಇದರಲ್ಲಿ ಇನ್‌ಫರ್ಮೇಷನ್ ತೆಗೆದುಕೊಳ್ಳುವುದಿಲ್ಲ ಏನೂ ಇಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಹೌದು ಅಥವಾ ಇಲ್ಲ ಎಂದು ಹೇಳಬೇಕು. ಏನು ಪರಿಶೀಲನೆ ಮಾಡಬೇಕು? ಯಾವ ಉದ್ದೇಶದಿಂದ? ಏನಾದರೂ ಉದ್ದೇಶಗಳಿವೆಯೆ? ಏಕೆಂದರೆ ಇದಕ್ಕೆ ಬೇರೆ ಬೇರೆ ಅರ್ಥಗಳು ಬರುತ್ತವೆ.

ಶ್ರೀ ಎಂ. ಎಸ್ ಪಾಟೀಲ್ ; ತಮ್ಮ ಅಭಿಪ್ರಾಯ ಏನು?

ಶ್ರೀ ಆರ್. ವಿ. ದೇಶಪಾಂಡೆ ; ನಮ್ಮ ಅಭಿಪ್ರಾಯ ಹೇಳುತ್ತೇವೆ ನಿಮ್ಮ ಅಭಿಪ್ರಾಯ ಬಂದ ಮೇಲೆ ನಮ್ಮ ಅಭಿಪ್ರಾಯ ಹೇಳುತ್ತೇವೆ.

ಅಧ್ಯಕ್ಷರು ; ಶ್ರೀ ವಿಜಯಕುಮಾರ್ ಶೆಟ್ಟಿ...

ಪೋಲೀಸ್ ಸಂಪರ್ಕ ವ್ಯವಸ್ಥೆಯನ್ನು ಆಧುನೀಕರಣ ಗೊಳಿಸುವುದು

2213 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪೋಲೀಸ್ ಸಂಪರ್ಕ ವ್ಯವಸ್ಥೆಯನ್ನು ಆಧುನೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ರಾಜ್ಯದಲ್ಲಿ ಪೋಲೀಸ್ ಸಂಪರ್ಕ ವ್ಯವಸ್ಥೆ ಬಹಳ ಹಳೆಯದಾಗಿದ್ದು, ಆಧುನೀಕ ಕಾಲಕ್ಕೆ ಸರಿಯಾಗಬಲ್ಲ ವ್ಯವಸ್ಥೆಯನ್ನು ಸರ್ಕಾರ ಮನ ಗಂಡಿದೆಯೇ?

ಇ) ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಬೆಂಗಳೂರು ಕೇಂದ್ರವನ್ನು ಎಲ್ಲಾ ಜಿಲ್ಲೆಗಳು ಸಂಪರ್ಕಿಸಲು ಅನುಕೂಲವಾಗುವಂತೆ ರೇಡಿಯೋ ಟೆಲಿಗ್ರಾಫಿ (ಹೈ ಫ್ರಿಕ್ವೆನ್ಸಿ) ಸಂಪರ್ಕ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆ ನಿಸ್ತಂತು ವಿಭಾಗ ಒದಗಿಸಿದೆ.

2) ಲ್ಯಾಂಡ್ ಲೈನ್ ಟೆಲಿಪ್ರಿಂಟರ್ ಸಂದೇಶ ಮಾಧ್ಯಮವನ್ನು ಅಳವಡಿಸಲಾಗಿದೆ.

3) ಒಂದೇ ಸಮಯಕ್ಕೆ ಎಲ್ಲಾ ಜಿಲ್ಲೆಗಳಿಗೆ ಸಂದೇಶ ನೀಡಲು ಆಟೋಮ್ಯಾಕ್ಸ್ ಸಂಪರ್ಕ ಮಾಧ್ಯಮವನ್ನು ಬೆಂಗಳೂರಿನಲ್ಲಿ ಅಳವಡಿಸಲಾಗಿ.

4) ಬೆಳಗಾಂ ಮತ್ತು ಬೆಂಗಳೂರುಗಳಲ್ಲಿ ಫ್ಯಾಸಿಮಿಲಿ ಮಾಧ್ಯಮವನ್ನು ಕಲ್ಪಿಸಲಾಗಿದೆ.

5) ಕರ್ನಾಟಕ ರಾಜ್ಯ ಮೀಸಲು ಪಡೆ ಮತ್ತು ಜಿಲ್ಲಾಮೀಸಲು ದಳ (ಸ್ಟ್ರೈಕಿಂಗ್ ಫೋರ್ಸ್)ಗೆ ವೈರಲೆಸ್ ವ್ಯವಸ್ಥೆ ಕಲ್ಪಿಸಿರುತ್ತೆ.

6) ರಾಜ್ಯದ ಎಲ್ಲಾ ಪೋಲೀಸ್ ಠಾಣೆಗಳಿಗೆ ನಿಸ್ತಂತು ಸಂಪರ್ಕ ವ್ಯವಸ್ಥೆ ವಿಸ್ತರಿಸಲಾಗಿದೆ.

7) ಎಲ್ಲಾ ಜಿಲ್ಲಾ ಕೇಂದ್ರ ಹಾಗೂ ಮುಖ್ಯ ಪಟ್ಟಣಗಳಲ್ಲಿ ಪೋಲೀಸ್ ಕಂಟ್ರೋಲ್ ರೂಮುಗಳನ್ನು ಸ್ಥಾಪಿಸಲಾಗಿದೆ.

8) ಎಲ್ಲಾ ಪೋಲೀಸ್ ಇನ್ಸ್‌ಪೆಕ್ಟರ್‌ಗಳ ವಾಹನಗಳಿಗೆ ವೈರ್‌ಲೆಸ್ ಸೆಟ್ಟುಗಳನ್ನು ಅಳವಡಿಸಲಾಗಿದೆ.

9) ಎಲ್ಲಾ ಟ್ರಾಫಿಕ್ ಪೋಲೀಸ್ ಅಧಿಕಾರಿಗಳ ಟ್ರಾಫಿಕ್ ಕೆಲಸಕ್ಕಾಗಿ ವೈರ್‌ಲೆಸ್ ಸೆಟ್ಟುಗಳನ್ನು ನೀಡಲಾಗಿದೆ.

10) ಬೆಂಗಳೂರು ಸಿಟಿಯ ಎಲ್ಲಾ ಪೋಲೀಸ್ ಅಧಿಕಾರಿಗಳ ಅನುಕೂಲಕ್ಕಾಗಿ ಹೊಸ ಸಿ.ಡಾಟ್ ದೂರ ಸಂಪರ್ಕ ವಿನಿಮಯ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.